ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ
ತೆಲುಗು ಗಂಗಾ ಯೋಜನೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬಂದ ವರದಿ ಪ್ರಕಾರ ತೆಲುಗು ಗಂಗಾ ಯೋಜನೆ ಬಗ್ಗೆ ನಿಲುವಳಿ ಸೂಚನೆಯನ್ನು ಎತ್ತಲು ಅನುಮತಿ ಕೊಡಬೇಕೆಂದು ನಾವು ಕೇಳಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಮಾಡುವುದಾದರೆ ನನ್ನ ಆಭ್ಯಂತರವೇನೂ ಇಲ್ಲ. ನೀವು ಕಳುಹಿಸಿರುವ ಅಡ್ವರ್ಟೈಸ್‌ಮೆಂಟ್ ಮೋಷನ್‌ನಲ್ಲಿ ತೆಲುಗು ಗಂಗಾ ಯೋಜನೆಗೆ ಜಲ ಆಯೋಗವು ಒಪ್ಪಿಗೆ ನೀಡಿದ ಹಿನ್ನೆಲೆಯಲ್ಲಿ' ಎಂದು ತಿಳಿಸಿದ್ದೀರಿ. ಜಲ ಆಯೋಗದವರು ತೆಲುಗು ಗಂಗಾ ಯೋಜನೆಗೆ ಅಂಗೀಕಾರ ನೀಡಿಲ್ಲ ಕೇಂದ್ರ ಸರ್ಕಾರದ ಜಲ ಮಂಡಳಿ ಆಯೋಗದವರು ಈ ತೆಲುಗು ಗಂಗಾ ಯೋಜನೆಗೆ ಅಂಗೀಕಾರ ಕೊಟ್ಟಿದ್ದಾರೆ ಎನ್ನುವ ಬಗ್ಗೆ ನಿಮ್ಮಲ್ಲಿ ಆಧಾರ ಇದ್ದರೆ, ಅದನ್ನು ನಮಗೆ ತೋರಿಸಿ. ತೆಲುಗು ಗಂಗಾ ಯೋಜನೆಗೆ ಇವತ್ತಿನವರೆಗೂ ಕೇಂದ್ರ ಸರ್ಕಾರದವರು ಒಪ್ಪಿಲ್ಲ. ಕೆಲವು ದಿವಸಗಳ ಹಿಂದೆ ಪೇಪರ್‌ನಲ್ಲಿ ತೆಲುಗು ಗಂಗಾ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆ ಎನ್ನುವ ಅರ್ಥ ಬರುವ ಹಾಗೆ ಬಂದಿದ್ದರಿಂದ ನಮ್ಮ ನೀರಾವರಿ ಮಂತ್ರಿಯವರು ತಕ್ಷಣ ಎಲ್ಲಾ ಪಕ್ಷದ ಸಂಸತ್ ಸದಸ್ಯರುಗಳನ್ನು ಕರೆದುಕೊಂಡು ಪ್ರಧಾನ ಮಂತ್ರಿಯವರನ್ನು ಭೇಟಿಯಾಗಿ ಪ್ರತಿಭಟನೆಯನ್ನು ಮಾಡಿದ್ದಾರೆ. ಮಾನ್ಯ ಸಂಸತ್ ಸದಸ್ಯರಾದ ನಂಜೇಗೌಡರು ಇದರ ಬಗ್ಗೆ ಬೆಂಗಳೂರಿನಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದನ್ನು ಮಾನ್ಯ ಸದಸ್ಯರುಗಳು ನೋಡಿರಬಹುದು. ಇದೇ ಉದ್ದೇಶಕ್ಕಾಗಿಯೇ ನಮ್ಮ ನೀರಾವರಿ ಮಂತ್ರಿಯವರು ಎಲ್ಲಾ ಸಂಸತ್ ಸದಸ್ಯರುಗಳೊಡನೆ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಮನವಿಯನ್ನು ಮಾಡಿದ್ದಾರೆ. ನಾನೂ ಸಹ ಪ್ರಧಾನ ಮಂತ್ರಿಯವರಿಗೆ ಇದರ ಬಗ್ಗೆ ಸ್ಟ್ರಾಂಗ್ ಆಗಿ ಅಂದರೆ ಕಠೋರ ಪತ್ರವನ್ನೂ ಕೂಡ ಬರೆದಿದ್ದೇನೆ. ಆದ್ದರಿಂದ ನಿಲುವಳಿ ಸೂಚನೆ ಮುಂಖಾಂತರ ಚರ್ಚೆ ಮಾಡುವುದಕ್ಕೆ ಯಾವುದೇ ಆಧಾರ ಇಲ್ಲ ಇದರ ಬಗ್ಗೆ ಸಂಯ್ಮನೆ ಚರ್ಚೆ ಮಾಡಬೇಕೆಂದು ಇದ್ದರೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಮಾಡಬೇಕೆಂದೇ ನೋಟೀಸ್ ಕೊಟ್ಟಿರುವುದು.

ಶ್ರೀ ರಾಮಕೃಷ್ಣ ಹೆಗಡೆ —ಇದರ ಬಗ್ಗೆ ಚರ್ಚೆ ಮಾಡುವುದು ಬೇಡ ಎನ್ನುವ ಅಭಿಪ್ರಾಯ ನನ್ನದಲ್ಲ ನಾವು ಈ ತಿಂಗಳ ೨೯ನೇ ತಾರೀಖಿನೊಳಗೆ ಬಜೆಟ್‌ನ್ನು ಪಾಸ್ ಮಾಡಬೇಕಾಗಿದೆ. ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆಗುವುದಕ್ಕೆ ಯಾವುದೇ ರೀತಿಯಲ್ಲೂ ಭಂಗ ಬರಕೂಡದು. ಬಜೆಟ್ ಮೇಲೆ ಮಾತನಾಡುವ ಸಮಯವನ್ನು ತೆಲುಗು ಗಂಗಾ ಯೋಜನೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಉಪಯೋಗಿಸುತ್ತೇವೆಂದು ಹೇಳಿದರೆ ಚರ್ಚೆ ಮಾಡಬಹುದು. ೩೦ನೇ ತಾರೀಖಿನೊಳಗೆ ಬಜೆಟ್ ಪಾಸ್ ಆಗಿರಬಹುದು. ೩೧ನೇ ತಾರೀಖು ರಜಾ ದಿನ ಇದೆ. ೨೯ನೇ ತಾರೀಖು ಈ ಸದನದಲ್ಲಿ ಬಜೆಟ್‌ನ್ನು ಪಾಸ್ ಮಾಡಿದರೆ ೩೦ನೇ ತಾರೀಖು ಕೌನ್ಸಿಲ್‌ನಲ್ಲಿ ಪಾಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ತೆಲುಗು ಗಂಗಾ ಯೋಜನೆ ವಿಚಾರ ಮಹತ್ವದ್ದಲ್ಲವೆಂದು ನಾನು ಹೇಳುವುದಿಲ್ಲ. ಚರ್ಚೆ ಮಾಡಬೇಕೆಂದರೆ ಈಗಲೂ ಚರ್ಚೆ ಮಾಡೋಣ. ಕೆಲವು ವಾರಗಳ ಬಿಟ್ಟು ಪುನಃ ಸದನ ಸೇರುತ್ತದೆ. ಆಗ ಬೇಕಾದಷ್ಟು ಕಾಲ ನಮ್ಮ ಹತ್ತಿರ ಇರುತ್ತದೆ ಒಂದೂವರೆ ತಿಂಗಳೂ ಬೇಕಾದರೂ ಆಗ ಕೂಡಬಹುದು ಕಳೆದ ಎರಡು ವರ್ಷಗಳಿಂದ ಸದನದ ಬೈಕಾಟ್ ಕಡಿಮೆಯಾಗಿದೆಯೆಂದು ಕೆಲವು ಸದಸ್ಯರುಗಳು ಹೇಳಿದ್ದಾರೆ ಯಾವುದೇ ಚರ್ಚೆಗೆ ಅವಕಾಶ ಕೊಡಬಾರದೆನ್ನುವ ಉದ್ದೇಶ ನಮಗೆ ಇಲ್ಲ. ಮುಂದೆ ಸೇರುವ ದಿನಗಳನ್ನು ಹಿಂದೆ ಎಂದೂ ಆಗದಷ್ಟು ಹೆಚ್ಚು ದಿವಸ ಕುಳಿತುಕೊಂಡು ಕಲಾಪ ನಡೆಸೋಣವೆಂದು ಮಾನ್ಯ ಸಭಾಪತಿಯವರಿಗೂ ಹೇಳಿದ್ದೇನೆ. ಆದುದರಿಂದ ಈ ಬಗ್ಗೆ ಚರ್ಚೆಯನ್ನು ಯಾವ ಸಮಯದಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದು ತಪ್ಪಾಗಿ ಬಿಟ್ಟಿದ್ದುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ ವಾರಗಟ್ಟಲೆ ಸಮಯ ಬೇಕಾಗಿಲ್ಲ. ಅಷ್ಟು ಸಮಯ ತೆಗೆದುಕೊಂಡು ಮಾತನಾಡತಕ್ಕಂಥ ವಿಚಾರ ಅದು ಅಲ್ಲ. ೨೯ನೇ ತಾರೀಖಿಗೆ ಇದನ್ನು ಸಂಪೂರ್ಣವಾಗಿ ಅನುಮತಿ ಕೊಟ್ಟ ಕಳುಹಿಸಬೇಕೆಂದು ಸುದ್ದಿ ಇರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಇವೊತ್ತು ನಾವು ಎತ್ತಿದ್ದೇವೆ. ಇದುವರೆಗೂ ಸೆಂಟ್ರಲ್ ವಾಟರ್

ಪವರ್‌ಕಮಿಶನ್‌ರವರು ಅಪ್ರೂವ್ ಮಾಡಿಲ್ಲ ಆದರೆ ಸುಮಾರು ೨೦-೨೫ ದಿವಸಗಳಿಂದ ಈ ಬಗ್ಗೆ ಒಂದು ಒತ್ತಡ ಇದ್ದುದನ್ನು ಮಾಡದೇ ಇದ್ದುದರಿಂದ, ಈವೊತ್ತು ಅದನ್ನು ಮಾಡಿಸಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ೨೯ನೇ ತಾರೀಖಿಗೆ ಅಪ್ರೊಪ್ರಿಯೇಷನ್ ಬಜೆಟ್ ಆಗಬೇಕು ಎಂದು ಹೇಳುತ್ತಿದ್ದಾರೆ. ಅವರು ಹೇಳುವುದು ಸರಿಯಾಗಿದೆ. ಆದರೆ ವಿಷಯಗಳ ಮಹತ್ವವನ್ನು ಆರಿತು ಸಭೆಯನ್ನು ಮೊದಲೇ ಕರೆಯ ಬೇಕಾಗಿತ್ತು. ಬಜೆಟ್ ಮಾಂಜೂರು ಮಾಡಿಸಿಕೊಳ್ಳುವುದು ಪ್ರಾಮುಖ್ಯವಾದುದು ಹೌದು. ಆದೇ ರೀತಿಯಲ್ಲಿ ರಾಜ್ಯಕ್ಕೆ ಸಂಬಂಧಪಟ್ಟಂಥ ಪ್ರಾಮುಖ್ಯವಾದ ವಿಚಾರಗಳ ಚರ್ಚೆ ಮಾಡುವುದು ಕೂಡ ಅಷ್ಟೇ ಮುಖ್ಯವಾದುದಾಗಿದೆ. ಕೆಲವು ವಿಚಾರಗಳಲ್ಲಿ ವಾರಗಟ್ಟಲೆ ಚರ್ಚೆ ಮಾಡಬೇಕೆಂದರೆ ಅದು ಆಗುವುದಿಲ್ಲ ಎಂಬುದನ್ನು ಒಪ್ಪುವುದಾದರೂ, ರಾಜ್ಯದ ಹಿತಾಸಕ್ತಿಗೆ ಸಂಬಂಧಪಟ್ಟಂಥ ವಿಚಾರಗಳು ಬಂದಾಗ ಇರುವ ಬಿಟ್ಟು ಹಾಡುಗಳನ್ನು ಬಿಟ್ಟು ಚರ್ಚೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಜನಗಳ ಸಮಸ್ಯೆಗಳು ಬೇರಾದರೂ ಇದ್ದರೆ ಅದನ್ನು ಇಲ್ಲಿ ನಾವುಗಳು ಚರ್ಚೆ ಮಾಡಲೇ ಬೇಕಾಗುತ್ತದೆ. ಅಂತಹ ಮುಖ್ಯವಾದ ಸಮಸ್ಯೆಯ ಕುರಿತು ಆಗಬೇಕಾದ ಚರ್ಚೆಯನ್ನು ಯಾವುದೇ ನೆಪದಲ್ಲಿ ಹೊಟಕು ಮಾಡ ಬಾರದು ಎಂದು ನಮ್ಮ ಮಾದದ ಉದ್ದೇಶವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗಾದರೆ ನಾಳೆಯ ದಿವಸ ಈ ಚರ್ಚೆಯನ್ನು ಇಟ್ಟುಕೊಳ್ಳೋಣ. ಇವೊತ್ತು ನಮ್ಮ ರಾಷ್ಟ್ರಪತಿಗಳು ಇಲ್ಲಿನ ಸರ್ಕಾರಂಭಕ್ಕೆ ಆಗಮಿಸಲಿದ್ದಾರೆ. ಆ ಸಮಾರಂಭದಲ್ಲಿ ಉಪಸ್ಥಿತರಲು ನಮ್ಮ ಈ ಸದನವನ್ನು ಮೂರುವರೆ ಗಂಟೆಗೆ ಒಂದು-ಒಂದಾಕಾಲಕ್ಕೂ ಗಂಟೆಯ ಅವಧಿಗೆ ಆಡ್‌ಜರ್ನ್ ಮಾಡುವಂಥ ಸಂದರ್ಭ ಒದಬಹುದು ಆ ಒಂದು ಸಮಾರಂಭದಲ್ಲಿ ನಾವು ಭಾಗವಹಿಸಿ ಅವರಿಗೆ ಗೌರವ ಸೂಚಲಿಕ್ಕೆ ಹೋಗುವುದು ಒಳ್ಳೆಯದು

ಅಧ್ಯಕ್ಷರು. ನಾಳೆ ಐದು ಗಂಟೆಗೆ ಈ ಕುರಿತು ಚರ್ಚೆ ಇಟ್ಟುಕೊಳ್ಳೋಣ. ಬೇಕಾದರೆ ಎರಡು ಗಂಟೆಯ ಕಾಲ ಚರ್ಚೆ ಆಗಲಿ.

ಶ್ರೀ ಎಂ. ಪಂಚಿಕಾರ್ಜುನ ಏರ್ಗ.—ಜೆಲಿಗೂ ಗಂಗಾ ವಿಚಾರದಲ್ಲಿ ಸಂಪೂರ್ಣವಾಗಿ ಚರ್ಚೆಯಾಗ ಬೇಕೆಂದು ಅನೇಕ ಜನ ಸದಸ್ಯರು ಬಯಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇದರ ಬಗ್ಗೆ ಮತಹೇದ ಬೇಡ. ನೀವು ಒಂದು ತೀರ್ಮಾನ ಮಾಡಿ. ನೀವು ಮಾಡಿದ ತೀರ್ಮಾನವನ್ನು ನಾವು ಒಪ್ಪುತ್ತೇವೆ.

ಅಧ್ಯಕ್ಷರು.—ಈ ನಿಲುವಳಿ ಸೂಚನೆಯನ್ನು ಪಿರಸ್ಕೃತ ಮಾಡಿದ್ದೇನೆ. ಈ ವಿಷಯಕ್ಕೆ ಕುರಿತು ನಾಳೆಯ ದಿವಸ ಐದು ಗಂಟೆಗೆ ನಿಯಮ ೬೮ರ ಕೆಳಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಈಗ, ಗಮನ ಸೆಳೆಯುವ ಸೂಚನೆಗಳು. ಶ್ರೀಯುತರುಗಳಾದ ವೇದಾಂತ ಹೆಬ್ಬಾಗಿ ಮತ್ತು ಜಿ. ಜಿ. ಜಡಿಬಿಂದಿಯವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಹಿಂಡಿರುವುದು.

ಗಮನ ಸೆಳೆಯುವ ಸೂಚನೆ

ಭಾರತ ಸೇವಾದಳಕ್ಕೆ ೧೯೮೭-೮೮ನೇ ಸಾಲಿನಲ್ಲಿ ಸರ್ಕಾರ ಅನುದಾನವನ್ನು ನಿಲ್ಲಿಸಿರುವುದು

ಶ್ರೀ ವೇದಾಂತ ಹೆಬ್ಬಾಗಿ.—ಅಧ್ಯಕ್ಷರೇ, "ಕರ್ನಾಟಕ ರಾಜ್ಯದಲ್ಲಿರುವ ಭಾರತ ಸೇವಾದಳಕ್ಕೆ ೧೯೮೭-೮೮ನೇ ಸಾಲಿನ ಅನುದಾನವನ್ನು ಸರ್ಕಾರವು ನಿಲ್ಲಿಸಿರುವ ಬಗ್ಗೆ ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎಲ್. ಶಂಕರ್ (ಯುವ ಜನ ಸೇವಾ ಮತ್ತು ಕ್ರೀಡಾ ರಾಜ್ಯಮಂತ್ರಿಯವರು). —ಅಧ್ಯಕ್ಷರೇ, "ಪೊಜನೇತರ ವೆಚ್ಚವನ್ನು ತಡೆಗಟ್ಟಲು ಎಫ್‌ಡಿ ೧೫ ಬಿಯುಡಿ ೮೭, ದಿ॥ ೪-೫-೧೯೮೭ರ ಸರ್ಕಾರಿ ಆದೇಶದಲ್ಲಿ ಭಾರತ ಸೇವಾದಳಕ್ಕೆ ಅನುದಾನ ನೀಡಿಕೆಯನ್ನು ನಿಲ್ಲಿಸಲಾಯಿತು. ಈ ಅನುದಾನ ನಿಲ್ಲಿಸುವುದರಿಂದ ರೂ. ೭ ೦೦ ಲಕ್ಷ ಉಳಿತಾಯವಾಗುವುದೆಂದು ಲೆಕ್ಕಹಾಕಲಾಯಿತು.

ಈ ಅನುದಾನ ನಿಲ್ಲಿಸುವುದರ ಬಗ್ಗೆ ಹಲವಾರು ಮನವಿಗಳನ್ನು ಸ್ವೀಕರಿಸಿದ್ದು ಈ ವಿಷಯವನ್ನು ಪುನಃ ಪರಿಶೀಲಿಸಲಾಯಿತು.